International Journal of Applied Research 2022; 8(6): 405-407




**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2022; 8(6): 405-407
www.allresearchjournal.com
Received: 20-03-2022
Accepted: 26-04-2022

**ಶ್ರೀನಿವಾಸ**
ಅಸೋಸಿಯೇಟ್ ಪ್ರೊಫೆಸರ್, ಇಚ್ಥೆಯಾಲಜಿ ಮತ್ತು ಆರ್ಕಿಯಾಲಜಿ ಮತ್ತು ರಿಸರ್ಚ್ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು, ಕರ್ನಾಟಕ, ಭಾರತ

**Corresponding Author:**
**ಶ್ರೀನಿವಾಸ**
ಅಸೋಸಿಯೇಟ್ ಪ್ರೊಫೆಸರ್, ಇಚ್ಥೆಯಾಲಜಿ ಮತ್ತು ಆರ್ಕಿಯಾಲಜಿ ಮತ್ತು ರಿಸರ್ಚ್ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು, ಕರ್ನಾಟಕ, ಭಾರತ

# ಕರ್ನಾಟಕದ ಶಾಸನೋಕ್ತ ಬ್ರಹ್ಮಪುರಿಗಳು

**ಶ್ರೀನಿವಾಸ**

## ಪರಿಚಯ

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಶಿಕ್ಷಣವನ್ನು ನೀಡುತ್ತಿದ್ದ ಕೇಂದ್ರಗಳಲ್ಲಿ ಘಟಿಕಾ ಸ್ಥಾನಗಳು, ಅಗ್ರಹಾರಗಳು, ಬ್ರಹ್ಮಪುರಿ, ಮಠ ಮತ್ತು ದೇವಾಲಯಗಳನ್ನು ಗುರುತಿಸಬಹುದು. ಇವುಗಳು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಶಿಕ್ಷಣವನ್ನು ನೀಡಲಾಗುತ್ತಿತ್ತು. ಈ ಕೇಂದ್ರಗಳು ದೊಡ್ಡ ವಸತಿ ವಿದ್ಯಾಲಯಗಳಾಗಿ ಸೇವೆ ಸಲ್ಲಿಸುತ್ತಿದ್ದವು ಮತ್ತು ಧಾರ್ಮಿಕ ಸಾಹಿತ್ಯ ಮತ್ತು ಜಾತ್ಯಾತೀತ ವಿಷಯಗಳ ಅಧ್ಯಯನಕ್ಕೆ ಸೌಕರ್ಯಗಳನ್ನು ಒದಗಿಸಿದ್ದವು. ಈ ಕೇಂದ್ರಗಳಲ್ಲಿ ದೇವಾಲಯಗಳು ಮತ್ತು ಮಠಗಳೂ ಸಹ ಸರ್ವ ಮತ್ತು ವಯಸ್ಕರ ಶಿಕ್ಷಣದ ಕೇಂದ್ರಗಳಾಗಿ ಸೇವೆ ಸಲ್ಲಿಸುತ್ತಿದ್ದವು. ಧರ್ಮ, ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಮಹಾನ್ ಪ್ರತಿಭಾಶಾಲಿಗಳನ್ನು ಹುಟ್ಟು ಹಾಕಿದ ಶೈಕ್ಷಣಿಕ ಕೇಂದ್ರಗಳಿದ್ದವು. ಬಹುತೇಕ ದಾಖಲೆಗಳು ಸಂಸ್ಕೃತ ವಿದ್ವಾಂಸರ ನಿರ್ವಹಣೆಗಾಗಿ ಮತ್ತು ಸಂಸ್ಕೃತ ಕೇಂದ್ರಗಳ ಸ್ಥಾಪನೆಗಾಗಿ ಸಹಾಯಧನ ನೀಡಿರುವುದರ ಬಗ್ಗೆ ತಿಳಿಸುತ್ತವೆ. ಹಾಗಾಗೀ ಈ ಲೇಖನದಲ್ಲಿ ಕರ್ನಾಟಕದ ಕೆಲವು ಶಾಸನೋಕ್ತ ಬ್ರಹ್ಮಪುರಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಪಟ್ಟಣಗಳಲ್ಲಿ ಅಥವಾ ಊರುಗಳಲ್ಲಿ ಬ್ರಹ್ಮಪುರಿಯು ಬ್ರಾಹ್ಮಣರ ಒಂದು ವಸಾಹತು ಅಥವಾ ನೆಲೆಯಾಗಿತ್ತು. ಅವು ನಗರದ ಭಾಗಗಳಾಗಿದ್ದವು. ಕೆಲವೊಂದು ವಿಷಯಗಳಲ್ಲಿ ಅವು ಅಗ್ರಹಾರಕ್ಕಿಂತ ಭಿನ್ನವಾಗಿದ್ದವು. ಮೋರೆಸ್‌ರವರು, 'ಬ್ರಹ್ಮಪುರಿಯನ್ನು ಊರುಗಳ ಅಥವಾ ನಗರಗಳ ಭಾಗಗಳಲ್ಲಿ ವಿದ್ವಾಂಸರಾದ ಬ್ರಾಹ್ಮಣರ ವಸಾಹತುವೆಂದು ನಿರೂಪಿಸುತ್ತಾರೆ [೧]. ಕೆಲವೊಂದು ದಾಖಲೆಗಳಲ್ಲಿ ಬ್ರಹ್ಮಪುರಿಯನ್ನು ಬ್ರಹ್ಮಪುರಿಗೇರಿಯೆಂದು [೨] ಉಲ್ಲೇಖಿಸಿರುವುದನ್ನು ಕಾಣಬಹುದು. ಎರಿಗೆಯ ಶಾಸನದಲ್ಲಿ ಬ್ರಹ್ಮಪುರಿಯ ಮಹಾಜನರ ಬಗ್ಗೆ ಉಲ್ಲೇಖವಿರುವುದನ್ನು ಗಮನಿಸಿದರೆ, ಅಗ್ರಹಾರದಂತೆ ಬ್ರಹ್ಮಪುರಿಯಲ್ಲಿಯೂ ಮಹಾಜನರು ಇದ್ದುದ್ದನ್ನು ತಿಳಿಯಬಹುದು. ಹಾಗೆಯೇ ಮುಳಗುಂದದ ಶಾಸನವೊಂದರಲ್ಲಿ [೩] ಬ್ರಹ್ಮಪುರಿಯ ಮಹಾಜನಮುಂ ಸಾಸಿರ್ವರು ಪರಿರಕ್ಷಿಸುವರುಪೇಕ್ಷೆಗೆಯ್ಯದವರ್ತ್ತಾವೆ ಮಾಡಿದ ದಾತಾರರಪ್ಪರ್' ಎಂದಿರುವುದು ಇದನ್ನು ಪುಷ್ಟೀಕರಿಸುತ್ತದೆ.

ಅಗ್ರಹಾರಗಳಿಗೂ ಬ್ರಹ್ಮಪುರಿಗಳಿಗೂ ವ್ಯತ್ಯಾಸಗಳಿದ್ದು, ಅಗ್ರಹಾರಗಳು ಗ್ರಾಮಗಳಾಗಿದ್ದು, ಪ್ರತಿ ಗ್ರಾಮವೂ ಪ್ರತ್ಯೇಕ ಘಟಕವಾಗಿ ಬ್ರಾಹ್ಮಣ ಸಮುದಾಯವು ಒಂದು ಆಡಳಿತ ಸಂಸ್ಥೆಯಾಗಿ ರೂಪುಗೊಂಡು ಸ್ಥಳದ ಆಸ್ತಿಯ ಮೇಲೆ ಹಿಡಿತವನ್ನಿಟ್ಟುಕೊಂಡಿತ್ತು. ಆದರೆ ಬ್ರಹ್ಮಪುರಿಗಳು ಆ ರೀತಿಯ ಸಂಸ್ಥೆಯಂತೆ ತೋರುವುದಿಲ್ಲ. ಬ್ರಹ್ಮಪುರಿಗಳಲ್ಲಿನ ಜನರು ಅಗ್ರಹಾರದ ಬ್ರಾಹ್ಮಣರು ಅನುಭೋಗಿಸಿದಂತೆ ಅಧಿಕಾರಗಳನ್ನು ಹೊಂದಿರಲಿಲ್ಲ. ಅವರು ನಗರ ಅಥವಾ ಪಟ್ಟಣದ ಸಮುದಾಯಗಳಲ್ಲಿ ಒಬ್ಬರಾಗಿದ್ದರು ಎಂಬುದು ಗಮನಾರ್ಹ. ಜೊತೆಗೆ ಬ್ರಹ್ಮಪುರಿಗಳನ್ನು ವಿವಿಧ ಹೆಸರುಗಳಿಂದ ಕರೆಯುತ್ತಿದ್ದುದ್ದನ್ನು ನಾವು ಅನೇಕ ಶಾಸನಗಳಿಂದ ತಿಳಿಯಬಹುದು. ಉದಾಹರಣೆಗೆ, ಕ್ರಿ.ಶ.೧೧೮೦ರ ಶಾಸನವೊಂದರಲ್ಲಿ [೪] ಜೇವೂರಿಗೆ ಬ್ರಹ್ಮಪುರಿಯನ್ನು ಶ್ರೀಮತ್ ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲದೇವರ ಬ್ರಹ್ಮಪುರಿ ಎಂದು ಉಲ್ಲೇಖಿಸಿದ್ದರೆ, ಕೂಡಲ ಕಪ್ಪಡಿ ಸಂಗಮದಲ್ಲಿಯ ಬ್ರಹ್ಮಪುರಿಗೆ ಆದಿ ಬ್ರಹ್ಮಪುರಿಯೆಂದು [೫] ಕರೆಯಲಾಗಿದೆ. ಹಾಗೆಯೇ ಕೇಶವ ಪುರದದಲ್ಲಿಯ ಬ್ರಹ್ಮಪುರಿಯನ್ನು ಶ್ರೀಮತ್ಸರ್ವ್ವನಮಸ್ಯದ ಬ್ರಹ್ಮಪುರಿ [೬] ಎಂದು ಕರೆಯಲಾಗಿದೆ. ಹಾಗೆಯೇ ಬ್ರಹ್ಮಪುರಿಗಳಿಗೆ ದೇವಸ್ಥಾನಗಳು ಹೊಂದಿಕೊಂಡಿರುವುದು ಸರ್ವೇಸಾಮಾನ್ಯವಾಗಿತ್ತು. ಉದಾಹರಣೆಗೆ ಶ್ರೀರಾಮೇಶ್ವರ ದೇವರ ಬ್ರಹ್ಮಪುರಿ [೭], ಶ್ರೀಕಲಿದೇವ ಬ್ರಹ್ಮಪುರಿ [೮], ಮೂಲದೇವಸ್ಥಾನದ ಬ್ರಹ್ಮಪುರಿ,

ಸಂಗಮೇಶ್ವರ ದೇವರ ಬ್ರಹ್ಮಪುರಿ [೯], ಗೋಪಾಳದೇವರ ಬ್ರಹ್ಮಪುರಿ–ಹೀಗೆ ಆ ದೇವರ ಹೆಸರಿನೊಂದಿಗೆ ಸೇರಿಸಿ ಬ್ರಹ್ಮಪುರಿ ಎಂದು ಕರೆದಿರುವುದನ್ನು ಕಾಣಬಹುದು.

ಅಗ್ರಹಾರಗಳಂತೆ ಬ್ರಹ್ಮಪುರಿಯೂ ಸಹ ವಿದ್ವಾಂಸರಾದ ಬ್ರಾಹ್ಮಣರಿಗೆ ಅವರ ಜೀವನ ನಿರ್ವಹಣೆಗಾಗಿ ಮಾಡಿದ ಭೂದಾನದಿಂದ ರೂಪುಗೊಂಡಿತ್ತು. ಅಗ್ರಹಾರಗಳಂತೆಯೇ ಬ್ರಹ್ಮಪುರಿಯೂ ಸಹ ಶಿಕ್ಷಣ ನೀಡುವುದರಲ್ಲಿ ಮುಖ್ಯ ಪಾತ್ರವನ್ನು ವಹಿಸಿತ್ತು. ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಜೀವನ ನಿರ್ವಹಣೆಗಾಗಿ

ಭೂಮಿಯನ್ನು ಅಥವಾ ಹಣವನ್ನು ನೀಡುವುದರ ಮೂಲಕ ಅವಕಾಶವನ್ನು ಕಲ್ಪಿಸಲಾಗಿತ್ತು. ಮನಗೂಳಿಯ ಶಾಸನದ ಪ್ರಕಾರ ‘ಘಟಿಕಾ ಸ್ಥಾನಗಳಲ್ಲಿ ಅಧ್ಯಯನ ಮಾಡಿ ಪದವಿಗಳನ್ನು ಪಡೆದ ಹಲವಾರು ಜನ ವಿದ್ವಾಂಸರು ಅಗ್ರಹಾರ ಮತ್ತು ಬ್ರಹ್ಮಪುರಿಗಳಲ್ಲಿ ಇರುತ್ತಿದ್ದರು.’ ಉದಾಹರಣೆಗೆ ಲಕ್ಷ್ಮೇಶ್ವರದ ಬ್ರಹ್ಮಪುರಿಯಲ್ಲಿ ಸಾವಿಯಣ ಘಳಿಸಾಸರು, ತ್ರಿವಿಕ್ರಮ ಘಳಿಸಾಸರು, ನಾಗವಿಷ್ಣು ಘಳಿಸಾಸರು, ಚಂದ್ರಘಳಿ ಸಾಸರು, ಮುದ್ದಣ ಘಳಿಸಾಸರು ಎಂದು ಮುಂತಾದವರ ಹೆಸರುಗಳಿರುವುದನ್ನು ಕಾಣಬಹುದು [೧೦]. ನಮಗೆ ಶಾಸನಗಳ ದಾಖಲೆಯ ಪ್ರಕಾರ ಕೆಲವು ನಗರಗಳು ಮತ್ತು ಪಟ್ಟಣಗಳು ಒಂದಕ್ಕಿಂತಲೂ ಹೆಚ್ಚು ಬ್ರಹ್ಮಪುರಿಗಳನ್ನು ಹೊಂದಿದ್ದವೆಂದು ಕಂಡುಬರುತ್ತದೆ. ಉದಾಹರಣಗೆ ದೇವರಗೆಣ್ಣೂರಿನಲ್ಲಿ ಎರಡು ಬ್ರಹ್ಮಪುರಿಗಳಿದ್ದರೆ [೧೧], ಬಲಿಪುರದಲ್ಲಿ ಮೂರು ಬ್ರಹ್ಮಪುರಿಗಳಿದ್ದವು [೧೨]. ಅಂತೆಯೇ ಅಣ್ಣಿಗೇರಿಯಲ್ಲಿ ಐದು ಬ್ರಹ್ಮಪುರಿಗಳು ಇದ್ದ ಉಲ್ಲೇಖಗಳಿದ್ದರೆ [೧೩], ಬಳ್ಳಿಗಾವೆಯಲ್ಲಿ ಏಳು ಬ್ರಹ್ಮಪುರಿಗಳಿದ್ದುವೆಂದು ಅಲ್ಲಿಯ ಶಾಸನಗಳಿಂದ ತಿಳಿಯಬಹುದು [೧೪].

ಅಗ್ರಹಾರಗಳ ಮಹಾಜನಗಳ ಸಂಖ್ಯೆಯಂತೆಯೇ ಬ್ರಹ್ಮ ಪುರಿಯ ಮಹಾಜನಗಳ ಸಂಖ್ಯೆಯಲ್ಲಿಯೂ ಒಂದು ಬ್ರಹ್ಮಪುರಿಯಿಂದ ಮತ್ತೊಂದು ಬ್ರಹ್ಮಪುರಿಗೆ ವ್ಯತ್ಯಾಸವಿರುವುದನ್ನು ಶಾಸನಗಳಲ್ಲಿ ಕಾಣಬಹುದು. ಅಂತೆಯೇ ಮುಳಗುಂದ ಬ್ರಹ್ಮಪುರಿಯಲ್ಲಿ ಒಂದು ಸಾವಿರ ಜನರಿದ್ದರೆ [೧೫], ಸೂಡಿಯ ಬ್ರಹ್ಮಪುರಿಯಲ್ಲಿ ಎಪ್ಪತ್ತು ಜನರಿದ್ದುದ್ದನ್ನು [೧೬] ಉಲ್ಲೇಖಿಸಬಹುದು. ಇದರ ಜೊತೆಗೆ ಅಗ್ರಹಾರಗಳಂತೆ ಬ್ರಹ್ಮಪುರಿಗಳಲ್ಲಿಯೂ ಮಹಾಜನರ ಸಂಖ್ಯೆಯು ಒಮ್ಮೆ ನಿರ್ಧಿಷ್ಟಗೊಳಿಸಿದ ನಂತರ ಯಾವುದೇ ಕಾರಣಕ್ಕಾಗಿ ಬದಲಾಯಿಸುತ್ತಿದ್ದಂತೆ ಕಂಡುಬರುವುದಿಲ್ಲ. ಉದಾಹರಣೆಗೆ ವಿಕ್ರಮಪುರಿಯ ಬ್ರಹ್ಮಪುರಿಯಲ್ಲಿ ಕ್ರಿ.ಶ.೧೦೫೦ರಲ್ಲಿ ೪೨ ಜನರಿದ್ದರೆ [೧೭], ಕ್ರಿ.ಶ.೧೦೬೨ರಲ್ಲಿ ೪೨ ಜನ [೧೮] ಮತ್ತು ಕ್ರಿ.ಶ.೧೦೮೭ರಲ್ಲಿಯೂ ೪೨ ಜನರಿದ್ದುದ್ದನ್ನೇ [೧೯] ತಿಳಿಸುತ್ತದೆ.

ಬ್ರಹ್ಮಪುರಿಗಳು ರಾಜರು, ಅವರ ಪರಿವಾರದವರು, ಸೇನಾಪತಿಗಳು ಹಾಗೂ ಮತ್ತಿತರ ಮುಖ್ಯ ವ್ಯಕ್ತಿಗಳಿಂದ ಸ್ಥಾಪನೆಯಾಗಿರುವ ಹಾಗೂ ಅವರಿಂದ ದಾನದತ್ತಿಗಳನ್ನು ಪಡೆದಿರುವ ಬಗ್ಗೆ ನಮಗೆ ಅನೇಕ ಶಿಲಾಶಾಸನಗಳು ಮಾಹಿತಿಯನ್ನು ನೀಡುತ್ತವೆ. ಬ್ರಹ್ಮಪುರಿಗಳನ್ನು ಸ್ಥಾಪಿಸಿದರೆ ಪುಣ್ಯ ಮತ್ತು ಕೀರ್ತಿ ಲಭಿಸುತ್ತದೆ ಎಂಬ ಆಶಯ ಇವರಿಗಿದ್ದುದ್ದನ್ನು ತಿಳಿಯ ಬಹುದು. ಅದರಂತೆ, ಚಾಳುಕ್ಯ ಚಕ್ರವರ್ತಿ ತ್ರಿಭುವನ ಮಲ್ಲದೇವನ ಕಾಲದ ಒಂದು ಶಾಸನವು [೨೦] ‘ಜೇವೂರಗಿಯಲ್ಲಿ ಅಗ್ರಹಾರ ಮತ್ತು ಬ್ರಹ್ಮಪುರಿಗಳನ್ನು ಸ್ಥಾಪಿಸಿ ಅದಕ್ಕೆ ಬೀಚಯ್ಯನು ಭೂಮಿಯನ್ನು ಕೊಂಡು ಅಲ್ಲಿ ನಡೆಯುತ್ತಿದ್ದ ಛತ್ರಕ್ಕೆ ಸಾನವಾಗಿ ನೀಡಿದನೆಂದು ತಿಳಿಸುತ್ತದೆ. ಜೊತೆಗೆ ಕ್ರಿ.ಶ.೧೨೪೫ರ’ ಶಾಸನವು [೨೧] ‘ಕದಂಬ ಮಲ್ಲಿದೇವನ ಮಡದಿ ಪದ್ಮಲದೇವಿಯು ಪುಲಿಕೆರೆ ಮುನ್ನೂರರೊಳಗಣ ಹುಲುಂಗುರು ಗ್ರಾಮದಲ್ಲಿ ಬ್ರಹ್ಮಪುರಿಯೊಂದನ್ನು ಸ್ಥಾಪಿಸಿ ಅಲ್ಲಿ ಪ್ರಸನ್ನ ಕೆಶವ ನಾರಾಯಣ ಮತ್ತು ಮಾಧವರ ಮೂರ್ತಿಗಳನ್ನು ಸ್ಥಾಪಿಸಿ ಆ ಬ್ರಹ್ಮಪುರಿಯಲ್ಲಿಯ ೬೪ಜನ ಬ್ರಾಹ್ಮಣರಿಗೆ ವಿವಿಧ ದತ್ತಿಗಳನ್ನು ನೀಡಿದಳು. ವಿವಿಧ ಗೋತ್ರದ ಈ ಬ್ರಾಹ್ಮಣರು ವಿಷ್ಣುವಿನಲ್ಲಿ ಭಕ್ತಿಯುಳ್ಳವರು ಮತ್ತು ವೇದ ವೇದಾಂಗಗಳಲ್ಲಿ ಪಾಂಡಿತ್ಯವನ್ನು ಪಡೆದವರಾಗಿದ್ದರು’ ಎಂದು ತಿಳಿಸುತ್ತದೆ.

ಹಾಗೆಯೇ ಶಿಕಾರಿಪುರದ ಬಳ್ಳಿಗಾವೆಯ ಒಂದು ಶಿಲಾಶಾಸನ [೨೨] ದಲ್ಲಿನ ಮಾಹಿತಿಯಂತೆ, “ಬಳ್ಳಿಗಾಮೆಯಲ್ಲಿ ತನ್ನ ನಿವಾಸ ಸ್ಥಾನವನ್ನು ಹೊಂದಿದ್ದ ಬನವಾಸಿಯ ಪ್ರಾಂತಾಧಿಕಾರಿಯಾದ ಕೇಶವದೇವನು ಬ್ರಹ್ಮಪುರಿಯೊಂದನ್ನು ಸ್ಥಾಪಿಸಿದನು. ಆ ಬ್ರಹ್ಮಪುರಿಯು ಸಕಲ ಗುಣಸಂಪನ್ನರಾದ ೩೮ಮಂದಿ ಬ್ರಾಹ್ಮಣರಿಂದ ಕೂಡಿತ್ತು. ಅವರುಗಳು ಅನೇಕ ಪುರಾಣಗಳು, ಸ್ಮೃತಿಗಳು, ಕಾವ್ಯಗಳು, ನಾಟಕಗಳು, ಭಾಷ್ಯಗಳಯ ಮತ್ತು ಮಂಜರಿಗಳಲ್ಲಿ ಪರಿಣಿತರಾಗಿದ್ದರು.ಅಲ್ಲದೆ ಚತುರ ವಾಗ್ಮಿಗಳು ಮತ್ತು ಪಂಡಿತರುಗಳಿಗೆ ಅವರು ಆಧಾರವಾಗಿದ್ದರು. ಅವರಿಗೆ ಶಿಲಾಶಾಸನಗಳನ್ನು ಓದಿ ಗ್ರಹಿಸುವ ಶಕ್ತಿ ಇತ್ತು. ಅವರ ವಸತಿಗಾಗಿ ಕೇಶವದೇವನು ಬಲಿಪುರ(ಬಳ್ಳಿಗಾಮೆ) ದಕ್ಷಿಣದ ಫಲವತ್ತಾದ ಭೂಮಿಯನ್ನು ಪಡೆದಿದ್ದನು. ಆ ಪ್ರದೇಶದಲ್ಲಿ ಎಲ್ಲ ರೀತಿಯ ಹಣ್ಣುಗಳೂ ಬೆಳೆಯುತ್ತಿದ್ದುದ್ದಲ್ಲದೇ ಅದು ವಿಶಾಲ ಹಾಗೂ ಕನ್ನಡಿಯಂತೆ ಸಮತಟ್ಟಾದ ಭೂಮಿಯಾಗಿತ್ತು. ಅಲ್ಲಿ ಆ ಮನೋಹರವಾದ ಪ್ರದೇಶದಲ್ಲಿ ಅವನು ಒಂದು ಸುಂದರವಾದ ಕೇಶವ ದೇವಾಲಯವನ್ನು ಕಟ್ಟಿಸಿದನು. ಆ ದೇವಾಲಯದ ಮುಂದಿನ ವಿಶಾಲವಾದ ಮನೆಗಳಿಂದ ತುಂಬಿ ಪ್ರತಿಯೊಂದು ಕೊಠಡಿಯಲ್ಲೂ ಮೃದುವಾದ ಹಾಗೂ ಎತ್ತರವಾದ ಪೀಠಗಳನ್ನು ಇಡಿಸಿ ಪಾತ್ರೆಗಳಿಂದ ಕೂಡಿದ ಆ ಮನೆಗಳನ್ನು ಮೇಲೆ ಹೇಳಿದ ಬ್ರಾಹ್ಮಣರಿಗೆ ದಾನ ಮಾಡಿದನು ಎನ್ನುವುದರಿಂದ ಅದು ಹೇಗೆ ಅಸ್ತಿತ್ವಕ್ಕೆ ಬಂದಿತು ಎನ್ನುವುದು ತಿಳಿಯುತ್ತದೆ. ಹಾಗೆಯೇ ಕ್ರಿ.ಶ.೧೧೬೮ರ ಶಾಸನದಲ್ಲಿ [೨೩] ‘ಶ್ರೀಧರ ದಂಡನಾಯಕ ಮತ್ತು ಅವನ ಸಹೋದರರು ಶ್ರೀಮದ್ರಾಜಧಾ ಪಟ್ಟಣವಾದ ಹುಲಿಗೆರೆಯಲ್ಲಿ ಬ್ರಹ್ಮಪುರಿಯನ್ನು ಸ್ಥಾಪಿಸಿದ ವಿಷಯ ಕಂಡು ಬರುತ್ತದೆ.

ನಮಗೆ ದೊರೆತಿರುವ ಶಾಸನಗಳ ಆಧಾರದ ಮೇಲೆ ಹೇಳುವುದಾದರೆ ಬ್ರಹ್ಮಪುರಿಯ ಬ್ರಾಹ್ಮಣರಿಗೂ ದಾನದತ್ತಿಗಳನ್ನು ಬಿಟ್ಟ ವಿಷಯವು ತಿಳಿಯುತ್ತದೆ. ಅದರಂತೆ, ಕ್ರಿ.ಶ.೧೦೪೪ರ ಶಾಸನವು [೨೪] ಬಾಗೇವಾಡಿಯ ಬ್ರಹ್ಮಪುರಿಯಲ್ಲಿದ್ದ ಭಟ್ಟೋಪಾಧ್ಯಾಯರಿಗೆ ಬಾಚಿಮಯ ಸೆಟ್ಟಿಯರ ಮಗ ಕಾಳಿದಾಸಯ್ಯನು ೫೦ ಮತ್ತರ ಭೂಮಿಯನ್ನು ಕೊಟ್ಟ ವಿಷಯವನ್ನು ತಿಳಿದರೆ, ರಾಜಧಾನಿ ಪಟ್ಟಣವಾದ ವಿಜಯಪುರದ ಬ್ರಹ್ಮಪುರಿಯಲ್ಲಿ ವಾಸವಾಗಿದ್ದ ೪೨ ಮಂದಿ ವಿದ್ವಾಂಸ ಮಹಾರಾಜರಿಗೆ ಅಕ್ಕಾದೇವಿಯು ತೋಟ ಹೊಲಗಳನ್ನು ಬಿಟ್ಟುಕೊಟ್ಟ ವಿಷಯವನ್ನು ಮತ್ತೊಂದು ಶಾಸನವು ತಿಳಿಸುತ್ತದೆ [೨೫]. ಇದೇ ರೀತಿ ಮತ್ತೊಂದು ಶಾಸನದಲ್ಲಿ ‘ವಿಷ್ಣುವರ್ಧನನ ರಾಣಿ ಬಮ್ಮಲೆಯು ಬೆನಚಟಗೆರೆ ಎಂಬ ಊರಿಗೆ ಬ್ರಹ್ಮಪುರವೆಂದು ಹೆಸರು ಕೊಟ್ಟ ಆ ಊರಿನಲ್ಲಿ ತಾನು ಕಟ್ಟಿಸಿದ ಬಮ್ಮಲೇಶ್ವರ ದೇವರಿಗೂ ಮತ್ತು ಬ್ರಾಹ್ಮಣರಿಗೂ ಆ ಊರಿನ ಆದಾಯವನ್ನು ಸಮ ಭಾಗವಾಗಿ ಹಂಚಿಕೊಟ್ಟ ವಿಷಯ ಹೇಳುತ್ತದೆ [೨೬].

ಒಟ್ಟಾರೆ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಶಿಕ್ಷಣ ಕೇಂದ್ರಗಳಾಗಿದ್ದ ಬ್ರಹ್ಮಪುರಿಗಳಲ್ಲಿ ಒಂದು ನಿರ್ಧಿಷ್ಟ ಸಮುದಾಯವಾದ ಬ್ರಾಹ್ಮಣರು ವಾಸಿಸುತ್ತಿದ್ದು, ಇವು ಪ್ರಾಥಮಿಕ

ಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣವನ್ನು ನೀಡುವ ಕೇಂದ್ರಗಳಾಗಿದ್ದವು ಎಂಬುದನ್ನು ತೀಳಿಯಬಹುದಾಗಿದ್ದು, ಇವುಗಳ ಸ್ಥಾಪನೆ, ಜೀರ್ಣೋದ್ಧಾರ, ಸಂರಕ್ಷಣೆಗಾಗಿ ಭೂಮಿ, ಹಣ, ಗ್ರಾಮ ಮುಂತಾದವುಗಳನ್ನು ದತ್ತಿ ಬಿಡುವುದರ ಮೂಲಕ ರಾಜರು, ರಾಣಿಯರು, ದಂಡನಾಯಕರು, ಸಾಮಾನ್ಯ ಜನರು ಪ್ರೋತ್ಸಾಹ ನೀಡುತ್ತಿದ್ದುದ್ದನ್ನು ಕಾಣಬಹುದು.

**ಕೊನೆ ಟಿಪ್ಪಣಿಗಳು:**


೧. ಮೋರೆಸ್, ಕದಂಬ ಕುಲ, ಪುಟ.೨೮೭

೨. ಸಿರ್ಕಾರ್.ಡಿ.ಸಿ.(ಪ್ರ.ಸಂ), ದೇಸಾಯಿ.ಪಿ.ಬಿ.(ಸಂ),೧೯೬೪, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೧೫, ಬಾಂಬೆ ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಭಾಗ–೨, ಶಾಸನ ಸಂಖ್ಯೆ.೧೯೦, ಕ್ರಿ.ಶ.೧೧೧೨

೩. ಸಿರ್ಕಾರ್.ಡಿ.ಸಿ.(ಪ್ರ.ಸಂ), ದೇಸಾಯಿ.ಪಿ.ಬಿ.(ಸಂ),೧೯೬೪, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೧೫, ಬಾಂಬೆ ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಭಾಗ–೨, ಶಾಸನ ಸಂಖ್ಯೆ.೬೪, ಕ್ರಿ.ಶ.೧೦೨೮

೪. ಪಂಚಮುಖಿ.ಎಸ್.ಆರ್.,(ಸಂ), ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಸಂಪುಟ.೨, ಶಾಸನ ಸಂಖ್ಯೆ.೨೮, ಕ್ರಿ.ಶ.೧೧೮೦

೫. ಸಿರ್ಕಾರ್.ಡಿ.ಸಿ.(ಪ್ರ.ಸಂ), ದೇಸಾಯಿ.ಪಿ.ಬಿ.(ಸಂ),೧೯೬೪, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೧೫, ಶಾಸನ ಸಂಖ್ಯೆ.೮೪, ಕ್ರಿ.ಶ.೧೧೬೦,

೬. ಸಿರ್ಕಾರ್.ಡಿ.ಸಿ.(ಪ್ರ.ಸಂ), ದೇಸಾಯಿ.ಪಿ.ಬಿ.(ಸಂ), ೧೯೬೪, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೧೫, ಬಾಂಬೆ ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಭಾಗ–೨, ಶಾಸನ ಸಂಖ್ಯೆ.೨೯, ಕ್ರಿ.ಶ.೧೨ನೇ ಶತಮಾನ

೭. ಸಿರ್ಕಾರ್.ಡಿ.ಸಿ.(ಪ್ರ.ಸಂ), ದೇಸಾಯಿ.ಪಿ.ಬಿ.(ಸಂ), ೧೯೬೪, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಬಾಂಬೆ ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಭಾಗ–೨, ಶಾಸನ ಸಂಖ್ಯೆ.೩೩, ಕ್ರಿ.ಶ.೧೨೧೧

೮. ಶಾಮಾಶಾಸ್ತ್ರಿ.ಆರ್.,(ಸಂ), ಸೌತ್ ಇಂಡಿಯನ್ ಇನ್ಸ್ ಕ್ರಿಪ್ಷನ್ಸ್, ಸಂಪುಟ.೯, ಶಾಸನ ಸಂಖ್ಯೆ.೭೨, ಕ್ರಿ.ಶ.೧೧೧೫

೯. ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಸಂಪುಟ.೨, ಶಾಸನ ಸಂಖ್ಯೆ.೩೩, ಕ್ರಿ.ಶ.೧೨೧೧

೧೦. ಶಾಮಾಶಾಸ್ತ್ರಿ.ಆರ್.,(ಸಂ), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೯, ಶಾಸನ ಸಂಖ್ಯೆ.೧೬೨, ಕ್ರಿ.ಶ.೧೧೯೩

೧೧. ಸಿರ್ಕಾರ್.ಡಿ.ಸಿ.(ಪ್ರ.ಸಂ), ಗಾಯಿ.ಜಿ.ಎಸ್.(ಸಂ), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೨೦, ಶಾಸನ ಸಂಖ್ಯೆ.೧೧೧, ಕ್ರಿ.ಶ.೧೧೪೦

೧೨. ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕ, ಸಂ–೮, ಸೊರಬ, ಶಾಸನ ಸಂಖ್ಯೆ.೨೭೭, ಕ್ರಿ.ಶ.೧೧೬೫

೧೩. ಸಿರ್ಕಾರ್.ಡಿ.ಸಿ.(ಪ್ರ.ಸಂ), ದೇಸಾಯಿ.ಪಿ.ಬಿ.(ಸಂ),೧೯೬೪, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೧೫, ಶಾಸನ ಸಂಖ್ಯೆ.೭೨, ಕ್ರಿ.ಶ.೧೧೮೬–೮೮

೧೪. ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕ, ಸಂ–೮, ಶಿಕಾರಿಪುರ, ಶಾಸನ ಸಂಖ್ಯೆ.೧೦೬,೧೦೮, ೧೧೯,೧೨೩, ಕ್ರಿ.ಶ.೧೧೯೨

೧೫. ಶಾಮಾಶಾಸ್ತ್ರಿ.ಆರ್.,(ಸಂ), ಸೌತ್ ಇಂಡಿಯನ್ ಇನ್ಸ್ ಕ್ರಿಪ್ಷನ್ಸ್, ಸಂ.೯, ಶಾಸನ ಸಂಖ್ಯೆ.೧೬೨, ಕ್ರಿ.ಶ.೧೦೨೮

೧೬. ಇಂಡಿಯನ್ ಆಂಟಿಕ್ವಯಿರಿ, ಸಂಪುಟ.೧೫, ಕ್ರಿ.ಶ.೧೦೨೮, ಪುಟ.೭೫

೧೭. ಕೃಷ್ಣಮಾಚಾರ್ಲು.ಸಿ.ಆರ್.,(ಪ್ರ.ಸಂ),ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೧೧, ಭಾಗ–೨, ಶಾಸನ ಸಂಖ್ಯೆ.೮೮, ಕ್ರಿ.ಶ.೧೦೫೦

೧೮. ಕೃಷ್ಣಮಾಚಾರ್ಲು.ಸಿ.ಆರ್.,(ಪ್ರ.ಸಂ), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂಪುಟ.೧೧, ಭಾಗ–೨,ಶಾಸನ ಸಂಖ್ಯೆ.೯೬, ಕ್ರಿ.ಶ.೧೦೬೧

೧೯. ಕೃಷ್ಣಮಾಚಾರ್ಲು.ಸಿ.ಆರ್.,(ಪ್ರ.ಸಂ),ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂಪುಟ.೧೧, ಭಾಗ–೨,ಶಾಸನ ಸಂಖ್ಯೆ.೧೩೫, ಕ್ರಿ.ಶ.೧೦೮೭

೨೦. ಪಂಚಮುಖಿ.ಎಸ್.ಆರ್.,(ಸಂ),೧೯೪೧, ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಸಂಪುಟ–೨, ಶಾಸನ ಸಂಖ್ಯೆ.೨೮, ಕ್ರಿ.ಶ.೧೧೦೮

೨೧. ಪಂಚಮುಖಿ.ಎಸ್.ಆರ್.,(ಸಂ), ೧೯೪೧, ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಸಂ–೨, ಶಾಸನ ಸಂಖ್ಯೆ.೨೮, ಕ್ರಿ.ಶ.೧೨೪೫

೨೨. ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ.೭, ಶಿಕಾರಿಪುರ, ಕ್ರಿ.ಶ.೧೧೫೯

೨೩. ಸಿರ್ಕಾರ್.ಡಿ.ಸಿ.(ಪ್ರ.ಸಂ), ಗಾಯಿ.ಜಿಎಸ್.(ಸಂ),ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂ.೨೦, ಶಾಸನ ಸಂಖ್ಯೆ.೧೧೧, ಕ್ರಿ.ಶ.೧೧೬೬

೨೪. ಶಾಮಾಶಾಸ್ತ್ರಿ.ಆರ್.,(ಸಂ), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂಪುಟ.೯, ಭಾಗ–೧, ಶಾಸನ ಸಂಖ್ಯೆ.೨೦, ಕ್ರಿ.ಶ.೧೧೪೨

೨೫. ಸಿರ್ಕಾರ್.ಡಿ.ಸಿ.(ಪ್ರ.ಸಂ), ದೇಸಾಯಿ.ಪಿ.ಬಿ.(ಸಂ),೧೯೬೪, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಬಾಂಬೆ ಕರ್ನಾಟಕ ಇನ್ಸ್ ಕ್ರಿಪ್ಷನ್ಸ್, ಭಾಗ–೧,ಶಾಸನ ಸಂಖ್ಯೆ.೮೮, ಕ್ರಿ.ಶ.೧೦೫೫

೨೬. ನರಸಿಂಹಮೂರ್ತಿ.ಎ.ವಿ.,(ಸಂ), ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ.೧೨,ಗೌರಿ ಬಿದನೂರು, ಕ್ರಿ.ಶ.೧೧೪೦